# ಅಧ್ಯಾಯ : 7

# ಹವಾಮಾನ, ವಾಯುಗುಣ ಮತ್ತು ವಾಯುಗುಣಕ್ಕೆ ಪ್ರಾಣಿಗಳ ಹೊಂದಾಣಿಕೆ

## I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ದಿನದ ಹವಾಮಾನ ವಾರ್ತೆಯಲ್ಲಿ ಪ್ರಕಟವಾಗುವ ಕನಿಷ್ಠ ಹಾಗೂ ಗರಿಷ್ಠ ತಾಪವು ಇದನ್ನು ಸೂಚಿಸುತ್ತದೆ.

ಎ) ದಿನದ ಹಗಲಿನ ಗರಿಷ್ಠ ತಾಪಮಾನ ಹಾಗೂ ರಾತ್ರಿಯ ಕನಿಷ್ಠ ತಾಪಮಾನ

ಬಿ) ತಿಂಗಳಿನ ಹಗಲಿನ ಗರಿಷ್ಠ ತಾಪಮಾನ ಹಾಗೂ ರಾತ್ರಿಯ ಕನಿಷ್ಠ ತಾಪಮಾನ

ಸಿ) ಮಧ್ಯಾಹ್ನ 12.00 ಹಾಗೂ ಮಧ್ಯರಾತ್ರಿ 12.00 ಕ್ಕೆ ದಾಖಲಾದ ತಾಪಮಾನ

ಡಿ) ದಿನದ ಹಗಲಿನ ಗರಿಷ್ಠ ಹಾಗೂ ರಾತ್ರಿಯ ಸರಾಸರಿ ತಾಪಮಾನ

ಉತ್ತರ : ____________________

2. ವಾಯುಗುಣಕ್ಕೆ ಸೂಕ್ತವಾದ ವ್ಯಾಖ್ಯಾನ

ಎ) ವರ್ಷದ ಹವಾಮಾನದಲ್ಲಾದ ಬದಲಾವಣೆ ಬಿ) ಸುಮಾರು 25 ವರ್ಷಗಳ ಸರಾಸರಿ ಹವಾಮಾನ

ಸಿ) ಹಲವು ವರ್ಷಗಳಲ್ಲಿ ಹವಾಮಾನದಲ್ಲಾದ ಬದಲಾವಣೆ ಡಿ) ಬೇಸಿಗೆ ಕಾಲದಲ್ಲಿನ ಹವಾಮಾನ

ಉತ್ತರ : ____________________

3. ಇವುಗಳಲ್ಲೊಂದು ಮರುಭೂಮಿಯ ಲಕ್ಷಣವಾಗಿದೆ.

ಎ) ಶುಷ್ಕ ಹಾಗು ಆರ್ದ್ರತೆ ಬಿ) ಒಣ ಹಾಗು ಆರ್ದ್ರತೆ

ಸಿ) ಉಷ್ಣ ಮತ್ತು ಶುಷ್ಕ ಡಿ) ಉಷ್ಣ ಮತ್ತು ತೇವ

ಉತ್ತರ : ____________________

4. ಸುಧಾಳು ವನ್ಯಜೀವಿಧಾಮಕ್ಕೆ ಭೇಟಿ ನೀಡಿದಾಗ ಅಲ್ಲಿ ದಟ್ಟವಾದ ಮರಗಳನ್ನು, ಪೊದೆಗಳನ್ನು, ಕೋತಿ, ಪಕ್ಷಿಗಳು, ಆನೆ, ಹಾವು, ಕಪ್ಪೆ ಇನ್ನೂ ಮುಂತಾದ ಪ್ರಾಣಿಗಳನ್ನು ನೋಡಿದಳು. ಹಾಗಾದರೆ ಆ ವನ್ಯಜೀವಿ ಧಾಮವು ಇರಬಹುದಾದ ಜಾಗ

ಎ) ಉಷ್ಣವಲಯ

ಬಿ) ಸಮಶೀತೋಷ್ಣವಲಯ

ಸಿ) ಧ್ರುವ ಪ್ರದೇಶ

ಡಿ) ಕರಾವಳಿ ಪ್ರದೇಶ

ಉತ್ತರ : ____________________

5. ಹಿಮ ಕರಡಿಯ ಹೊಂದಾಣಿಕೆ ಲಕ್ಷಣ

i) ಚರ್ಮದ ಕೆಳಗೆ ಕೊಬ್ಬಿನ ಪದರನ್ನು ಹೊಂದಿದೆ

ii) ಉದ್ದನೆಯ, ಬಾಗಿದ ಮತ್ತು ಮೊನಚಾದ ಉಗುರುಗಳು

iii) ಜಾರುವ ದೇಹ

iv) ದಟ್ಟವಾದ ಬಿಳಿಯ ಉಣ್ಣೆ

ಎ) i ಬಿ) i ಮತ್ತು ii ಸಿ) i ,ii ಮತ್ತು iii ಡಿ) i,ii ಮತ್ತು iv

ಉತ್ತರ : ____________________

6. ಪೆಂಗ್ವಿನ್‌ಗಳಿಗೆ ಸಂಬಂಧಿಸಿಲ್ಲದ ಹೇಳಿಕೆ

ಎ) ಅವುಗಳು ಯಾವಾಗಲೂ ಒಂದಕ್ಕೊಂದು ಅಂಟಿಕೊಂಡಿರುತ್ತವೆ.

ಬಿ) ಅವು ಈಜುವುದಿಲ್ಲ

ಸಿ) ಕಾಲುಗಳಲ್ಲಿ ಜಾಲಪಾದ ಹೊಂದಿವೆ.

ಡಿ) ಧಾರಾರೇಖಾಕಾರದ ದೇಹ ಹೊಂದಿವೆ.

ಉತ್ತರ : ____________________

7. ಉಷ್ಣ ವಲಯದ ಮಳೆಕಾಡುಗಳು ವಿವಿಧ ಜಾತಿಯ ಬಹಳಷ್ಟು ಸಂಖ್ಯೆಯ ಸಸ್ಯ ಹಾಗು ಪ್ರಾಣಿಗಳ ಇರುವಿಕೆಗೆ ಬಹಳ ಅನುಕೂಲಕರವಾಗಿವೆ ಕಾರಣ,

i) ಉಷ್ಣ ಮತ್ತು ತೇವಭರಿತ ವಾಯುಗುಣ

ii) ಈ ಪ್ರದೇಶಗಳು ಮಂಜಿನಿಂದ ಆವೃತವಾಗಿವೆ

iii) ವರ್ಷ ಪೂರ್ತಿ ಹಗಲು ರಾತ್ರಿಗಳ ಅವಧಿಯು ಒಂದೇ ಸಮನಾಗಿ ಇರುತ್ತದೆ

iv) ಈ ಪ್ರದೇಶಗಳಲ್ಲಿ ಹೇರಳವಾಗಿ ಮಳೆ ಸುರಿಯುತ್ತದೆ

(ಎ) (i), (ii) ಮತ್ತು iii (ಬಿ) (ii), (iii) ಮತ್ತು (iv)

(ಸಿ) (i), (ii) ಮತ್ತು (iv) (ಡಿ) (i), (iii) ಮತ್ತು (iv)

ಉತ್ತರ : ____________________

8. ಭೂಮಿಯ ಅತೀ ತಂಪಾದ ಪ್ರದೇಶ

ಎ) ಧ್ರುವ ಪ್ರದೇಶ ಬಿ) ಮರುಭೂಮಿ

ಸಿ) ಉಷ್ಣ ವಲಯ ಡಿ) ಕರಾವಳಿ ಪ್ರದೇಶ

ಉತ್ತರ: ____________________________

## II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

9. ನೀರಿನಿಂದ ಹೊರತೆಗೆದ ಮೀನು ಸಾಯುತ್ತದೆ ಅದೇ ರೀತಿ ಹಲ್ಲಿಯು ನೀರಿನಲ್ಲಿ ಬದುಕಲಾರದು. ಹಾಗಾದರೆ ಈ ವಾಸಸ್ಥಾನಕ್ಕೆ ಹೊಂದಾಣಿಕೆಯಾಗಲು ಮೀನು ಹಾಗೂ ಹಲ್ಲಿಯ ದೇಹ ರಚನೆಯನ್ನು ತಿಳಿಸಿ.

ಉತ್ತರ :____________________________

10. ನೀರು ಮತ್ತು ನೆಲದ ಮೇಲೆ ವಾಸಿಸುವ ಒಂದು ಪ್ರಾಣಿಯನ್ನು ಹೆಸರಿಸಿ.

ಉತ್ತರ :____________________________

11. ಉಷ್ಣ ವಲಯದ ಮಳೆಕಾಡುಗಳು ಹಾಗು ಧ್ರುವ ಪ್ರದೇಶದಲ್ಲಿ ವಾಸಿಸುವ ಎರಡೆರಡು ಪ್ರಾಣಿಗಳನ್ನು ಹೆಸರಿಸಿ.

ಉತ್ತರ : 1. ____________________________

2. ____________________________

12. ಹಿಮಕರಡಿಗಳು ಶ್ವೇತ(ಬಿಳಿ) ತುಪ್ಪಳವನ್ನು ಹೊಂದಿರುವುದು ಧ್ರುವ ಪ್ರದೇಶದ ವಾಯುಗುಣಕ್ಕೆ ಹೊಂದಿಕೊಳ್ಳಲು ಹೇಗೆ ಸಹಾಯಕವಾಗಿದೆ?

ಉತ್ತರ : ____________________________

## III. ಈ ಕೆಳಗಿನ ಹೇಳಿಕೆಗಳು ತಪ್ಪಾಗಿವೆ ಸರಿಪಡಿಸಿ ಬರೆಯಿರಿ.

13. ಹವಾಮಾನಕ್ಕಿಂತ ವಾಯುಗುಣವನ್ನು ಸುಲಭವಾಗಿ ಲೆಕ್ಕಹಾಕಬಹುದು.

ಉತ್ತರ : ____________________________

14. ಆನೆಯ ದಂತವು ಆನೆಯನ್ನು ಚಳಿಯಿಂದ ರಕ್ಷಿಸುತ್ತದೆ.

ಉತ್ತರ : ____________________________

15. ಮಂಗ, ಗೊರಿಲ್ಲಾ, ಹುಲಿ, ಆನೆ, ಚಿರತೆ, ಹಲ್ಲಿ, ಹಾವು, ಪಕ್ಷಿ ಮತ್ತು ಕೀಟಗಳು ಧ್ರುವ ಪ್ರದೇಶದಲ್ಲಿ ಕಂಡುಬರುತ್ತವೆ.

ಉತ್ತರ : ____________________________